**ಸಾಕ್ಷಿಗೆ ದಿನಾಂಕ:12-01-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಮುಖ್ಯ ವಿಚಾರಣೆ :: 1 ಮತ್ತು 3 ನೇ ಪ್ರತಿವಾದಿಗಳ ಪರ ಶ್ರೀ.RCS ವಕೀಲರಿಂದ ::**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರವನ್ನು ಈಗಾಗಲೇ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ವಿಷಯಗಳು ಸರಿಯಾಗಿದ್ದು, ನಾನೇ ಓದಿ ತಿಳಿದು ಸಹಿ ಮಾಡಿರುತ್ತೇನೆ.

ಮುಂದುವರೆದು ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

| Sl.No. | Documents | Exhibits |
|---|---|---|
| 1 | 1 ನೇ ಪ್ರತಿವಾದಿಯು ನನ್ನ ಪರವಾಗಿ ಮಾಡಿಕೊಟ್ಟಿರುವ ಎಸ್ ಪಿ ಎ | Ex.D-1 |

ಆದುದರಿಂದ ಪ್ರತಿವಾದ ಪತ್ರದಲ್ಲಿ ಕೋರಿಕೊಂಡಂತೆ ದಾವೆಯನ್ನು ವಜಾ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**:: ಪಾಟೀ ಸವಾಲು :: ವಾದಿ ಪರ ಶ್ರೀ. CSS ವಕೀಲರಿಂದ ::**

ಈ ದಾವೆಯನ್ನು ವಾದಿಯು ಅಜ್ಜಂಪುರ ಗ್ರಾಮದ ಸರ್ವೇ ನಂಬರ್ 209 ರಲ್ಲಿನ 29 ಗುಂಟೆ ಸಂಬಂಧಪಟ್ಟಂತೆ  ಹೂಡಿರುತ್ತಾರೆ. ಇತರೇ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಜಯಕೃಷ್ಣ ಮೂರ್ತಿ ಅಂದರೆ 3 ನೇ ಪ್ರತಿವಾದಿ ನನ್ನ ಅಣ್ಣ. ನಾನು 3 ನೇ ಪ್ರತಿವಾದಿಯ ಪರವಾಗಿ ಸಾಕ್ಷಿ ನುಡಿಯುತ್ತಿಲ್ಲ, ಪ್ರತ್ಯೇಕವಾಗಿ ನುಡಿಯುತ್ತಿದ್ದೇನೆ.  ಮೃತ ವಾದಿಯನ್ನು ನಾನು ನೋಡಿರುವುದಿಲ್ಲ. ಈ ದಾವೆ ಹೂಡಿದ ನಂತರದಲ್ಲಿ ವಾದಿ ಮೃತರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವೆ ಹೂಡಿದ ಸಮಯದಿಂದ ನ್ಯಾಯಾಲಯಕ್ಕೆ ಬರುತ್ತಿದ್ದೇನೆ. 2013 ರಲ್ಲಿ ವಾದಿ ಬದುಕಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ವಾದಿಯ ತಂದೆ ಗವ್ವಪ್ಪನಿಗೆ ಹನುಮಂತಪ್ಪ ಎನ್ನುವ ಅಣ್ಣ ಇದ್ದರು ಎಂದರೆ ಸರಿ. ಗವ್ವಪ್ಪ ಮತ್ತು ಹನುಮಂತಪ್ಪ ನ ತಂದೆಯ ಹೆಸರು ರಂಗಪ್ಪ ಆಗಿರುತ್ತದೆ ಎಂದರೆ ಸರಿ. ಸದರಿ ರಂಗಪ್ಪನಿಗೆ ಶಿವನಿ ರಂಗಪ್ಪ ಎಂದು ಸಹ ಜನ ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ರಂಗಪ್ಪನ ತಂದೆಯ ಹೆಸರು ತಿಮ್ಮಪ್ಪ ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಹನುಮಂತಪ್ಪರವರನ್ನು ನಾನು

ನೋಡಿರುತ್ತೇನೆ. ಹನುಮಂತಪ್ಪ ರವರಿಗೆ ಬಸಪ್ಪ, ಗೋಪಾಲಪ್ಪ, ತಿಮ್ಮಪ್ಪ ಮತ್ತು ಚಂದ್ರಪ್ಪ ಎನ್ನುವ ಮಕ್ಕಳು ಇದ್ದರು ಎಂದರೆ ಸಾಕ್ಷಿಯು ನನಗೆ ಬಸಪ್ಪ ಹೊರತುಪಡಿಸಿ ಇತರೇ ಮಕ್ಕಳ ಬಗ್ಗೆ ಗೊತ್ತಿಲ್ಲ. ನಾನು ಈಗ ಹೇಳುತ್ತಿರುವ ಬಸಪ್ಪ ಮೃತರಾಗಿರುತ್ತಾರೆ ಎಂದರೆ ಸರಿ. ಬಸಪ್ಪನಿಗೆ ರಂಗಪ್ಪ, ರಾಜಪ್ಪ ಮತ್ತು ಲೋಕೇಶ ಹಾಗೂ ಕೃಷ್ಣಮೂರ್ತಿ ಎನ್ನುವ ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಗ್ರಾಮದ ರೇವಣ ಸಿದ್ದೇಶ್ವರ ಬೀದಿಯಲ್ಲಿ ಇರುವ ಗೋಪಾಲಪ್ಪ ಎನ್ನುವವರ ಪರಿಚಯ ನನಗೆ ಇಲ್ಲ.

ದಾವಾ ಸರ್ವೇ ನಂಬರ್ 209 ರ ಒಟ್ಟು ವಿಸ್ತೀರ್ಣ ಎರಡುವರೆ ಎಕರೆ ಆಗಿರುತ್ತದೆ ಎಂದರೆ ಸರಿ. ಸರ್ವೇ ನಂಬರ್ 209 ಪ್ರಸ್ತುತದಲ್ಲಿ 4 ಪೋಡಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯು ಮೂಲತಃ ರಂಗಣ್ಣ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ರಂಗಣ್ಣ ಮೃತರಾದ ನಂತರದಲ್ಲಿ ಪೌತಿ ಆಧಾರದಲ್ಲಿ ಸದರಿ ಜಮೀನಿನ ಖಾತೆಯು ಹನುಮಂತಪ್ಪನಿಗೆ ಬಂದಿರುತ್ತದೆ ಎಂದರೆ ಸರಿ. ಹನುಮಂತಪ್ಪ ಮತ್ತು ಗವ್ಯಪ್ಪ ರವರ ನಡುವೆ ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಭಾಗದ ಬಗ್ಗೆ ನನ್ನ ತಂದೆ ನನಗೆ ತಿಳಿಸಿರುತ್ತಾರೆ. ಸದರಿ ವಿಭಾಗಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ವೈಯಕ್ತಿಕವಾಗಿ ನೋಡಿರುವುದಿಲ್ಲ. ಸರ್ವೇ ನಂಬರ್ 209 ರಲ್ಲಿನ 2 ಎಕರೆ 32 ಗುಂಟೆ ಜಾಗದ ಖಾತೆಯು ಹನುಮಂತಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಹನುಮಂತಪ್ಪ ಮತ್ತು ಗವ್ಯಪ್ಪನ ನಡುವೆ ಯಾವುದೇ ವಿಭಾಗ ಆಗದಿದ್ದರೂ ದುರುದ್ದೇಶದಿಂದ ಆಗಿರುತ್ತದೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಹನುಮಂತಪ್ಪ ಮತ್ತು ಗವ್ಯಪ್ಪ ಜಂಟಿಯಾಗಿ ದಾವಾ ಸ್ವತ್ತುಗಳನ್ನು ಅನುಭವಿಸುತ್ತಾ ಬಂದಿದ್ದರು ಎಂದರೆ ಸರಿಯಲ್ಲ. ಹನುಮಂತಪ್ಪ ದಾವಾ ಸ್ವತ್ತವನ್ನು ನಮಗೆ ಮಾರಾಟ ಮಾಡಲು ಅವರಿಗೆ ಸಂಪೂರ್ಣವಾದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತುಗಳಲ್ಲಿ ಗವ್ಯಪ್ಪನ ವಾರಸುದಾರರಿಗೆ ಅರ್ಧಾಂಶ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಸ್ವತ್ತನ್ನು ಖರೀದಿ ಮಾಡಿರುವ ಬಗ್ಗೆ ಕ್ರಯಪತ್ರವನ್ನು ನನ್ನ ವಕೀಲರಿಗೆ ನೀಡಿರುತ್ತೇನೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವನ್ನು ನಾನು ಓದಿರುತ್ತೇನೆ, ಆದರೆ ನಿಖರವಾಗಿ ಅದರಲ್ಲಿ ಇರುವ ವಿಚಾರಗಳು ನನಗೆ ಈಗ ನೆನಪಿಲ್ಲ. ಸದರಿ ಕ್ರಯಪತ್ರದಲ್ಲಿ ಹನಮಂತಪ್ಪ ಮತ್ತು ಗವ್ಯಪ್ಪ ನ

ನಡುವೆ ವಿಭಾಗವಾದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಆದಕಾರಣ ಹನುಮಂತಪ್ಪನಿಗೆ ನಮಗೆ ಸಂಪೂರ್ಣ ಜಾಗವನ್ನು ಮಾರಾಟ ಮಾಡಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಹಕ್ಕು ಇಲ್ಲದೇ ಜಾಗವನ್ನು ನಾವು ಖರೀದಿ ಮಾಡಿದ ಕಾರಣ ನಮಗೂ ಸಹ ಸದರಿ ಆಸ್ತಿಯ ಮೇಲೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ.

ಗವ್ವಪ್ಪನ ಕುಟುಂಬದವರಿಗೆ ದಾವಾ ಶೆಡ್ಯೂಲ್ ಸ್ವತ್ತುಗಳಲ್ಲಿ ಭಾಗ ಕೊಡುವುದನ್ನು ತಪ್ಪಿಸಲು ದುರುದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಸಂಪೂರ್ಣ ವೈಯಕ್ತಿಕ ಮಾಹಿತಿ ಸಹ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಸ್ವತ್ತುಗಳು ಗ್ರಾಮಕ್ಕೆ ಹತ್ತಿರವಾಗಿ ಇರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಸುತ್ತಮತ್ತಲು ನಿವೇಶನ ಮಾಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಜಮೀನಿನಲ್ಲಿ ರಾಗಿ ಹಾಗೂ ಜೋಳ ಬೆಳೆಯನ್ನು ಬೆಳೆಯುತ್ತಿದ್ದೇವೆ. ಸದರಿ ಆಸ್ತಿಯಿಂದ ವಾರ್ಷಿಕ ಆದಾಯ 8 ಸಾವಿರ ಇರುತ್ತದೆ. ನಮ್ಮ ಸ್ವತ್ತಿನಿಂದ ನಾವು ವಾರ್ಷಿಕ 2 ಲಕ್ಷ ಆದಾಯ ಪಡೆಯುತ್ತಿದ್ದೇವೆ ಎಂದರೆ ಸರಿಯಲ್ಲ. ನನಗೆ ದಾವೆಯ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲದಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: